

ಬರೆದಿದ್ದಷ್ಟೇ ಅಲ್ಲ, ಬರೆದ ಪ್ರತಿಯೊಂದು ಪುಟವನ್ನು ಅಚ್ಚುಕಟ್ಟಾಗಿ ಉಳಿಸಿಕೊಂಡು ಬಂದಿದ್ದಾರೆ. ಕವಿಯ ಭಾವಕೋಶದಂತೆ ಕಾಣಿಸುವ ಅವರ ಪುಸ್ತಕ ಸಂಗ್ರಹವನ್ನು ನೋಡಿದರೆ, ಬಹುಶಃ ಅವರ ಜೀವನದಲ್ಲಿ ಇದುವರೆಗೂ ಔಟ್‌ಡೇಟೆಡ್ ಆದ ಯಾವ ವಸ್ತುವೂ ಇಲ್ಲವೆಂದು ಅನಿಸುತ್ತದೆ. ಬಾಲ್ಯದಲ್ಲಿ ಬಳಸಿದ ಎಲ್ಲ ಪರಿಕರಗಳಿಗೂ ಅವರು ಈಗ ವಾಸವಿರುವ ಮನೆಯಲ್ಲಿ ಜಾಗ ಇದೆ.

ಇರುವ ಮನೆಯನ್ನು ಸಾಲಕ್ಕಾಗಿ ಕಳೆದುಕೊಂಡ ಮೇಲೆ ಜೀವನ ನಿರ್ವಹಣೆಗಾಗಿ ತಾಯಿಯ ತವರೂರು ಮನಗುಂಡಿಗೆ ಅವರು ಹೋಗಬೇಕಾಯಿತು. ಅಜ್ಜನ (ತಂದೆಯ ತಂದೆ) ನಾಮಧೇಯವನ್ನು ಹೊತ್ತ ಸಿದ್ಧಲಿಂಗ, ಮನಗುಂಡಿಯಲ್ಲಿ ದನ ಕಾಯುವುದು, ಅಜ್ಜನ ಚಾದಂಗಡಿಯಲ್ಲಿ ಕಪ್ಪುಬಸಿ ತೊಳೆಯುವುದು, ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದ. ಅವ್ವ ಗಿರಿಜವ್ವ ಅವರಿವರ ಹೊಲಮನೆಯಲ್ಲಿ ಕೂಲಿ ಮಾಡದೇ ಹೊಟ್ಟೆ ತುಂಬುತ್ತಿರಲಿಲ್ಲ. ಯಾದವಾಡದಿಂದ ಮನಗುಂಡಿಗೆ ಬಂದರೂ ಬಡತನದಿಂದ ಬಿಡುಗಡೆ ಸಿಗಲಿಲ್ಲ. ಆದರೆ ಅಜ್ಜ, ಸೋದರ ಮಾವಂದಿರ ಪ್ರೀತಿಯಲ್ಲಿ ಯಾವ ಬಡತನವೂ ಇರಲಿಲ್ಲ. ತಂದೆಯನ್ನು ಕಳೆದುಕೊಂಡ ಹುಡುಗನನ್ನು ತಮ್ಮ ಕೈಲಾದ ಮಟ್ಟಿಗೆ ಪೋಷಿಸಿ ಕಕ್ಕುಲಾತಿಯಿಂದ ನೋಡಿಕೊಂಡರು. ಹುಡುಗನಲ್ಲಿ ಹುದುಗಿರುವ ಪ್ರತಿಭೆ, ಜಾಣತನಗಳು, ನಿಧನಿಧಾನವಾಗಿ ಎಲ್ಲರ ಗಮನಕ್ಕೆ ಬರಲಾರಂಭಿಸಿದವು. ಸಂಗಪ್ಪ ಅಂಗಡಿ ಎನ್ನುವ ಶಿಕ್ಷಕರೊಬ್ಬರು ಸಿದ್ಧಲಿಂಗನ ಸಾಮರ್ಥ್ಯವನ್ನು ಗಿರಿಜವ್ವನ ಗಮನಕ್ಕೆ ತಂದು, ಹುಡುಗನನ್ನು ಧಾರವಾಡದ ಶಾಲೆಗೆ ಸೇರಿಸಲು ಶಿಫಾರಸು ಮಾಡಿದರು. ಇದು ಅವರ ಜೀವನದ ತಿರುವು.

ಧಾರವಾಡದ ಸರ್ಕಾರಿ ಪ್ರಾಥಮಿಕ ಗಂಡುಮಕ್ಕಳ ಶಾಲೆಗೆ ಸೇರಿದ ಸಿದ್ಧಲಿಂಗ, ಸಂಗಪ್ಪ ಅಂಗಡಿಯವರ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಶೈಕ್ಷಣಿಕ ಸಾಧನೆಯ ಒಂದೊಂದೇ ಮೆಟ್ಟಿಲನ್ನೇರುತ್ತಾ ಶಿಷ್ಯವೇತನವನ್ನು ಪಡೆದು ಹತ್ತನೇ ವರ್ಗದವರೆಗೆ ಕಲಿಯಲು ಅನುಕೂಲವಾಯಿತು. ಬೀದಿ ದೀಪದ ಬೆಳಕಿನಲ್ಲಿ ಓದಿದ ಹುಡುಗ ಶಾಲೆಗೆ ಮೊದಲ ಸ್ಥಾನವನ್ನು ಗಳಿಸಿ ತೇರ್ಗಡೆಯಾದ. ಶಾಲೆಯಲ್ಲಿರುವಾಗಲೇ ಇಂಗ್ಲಿಷ್, ಹಿಂದಿ, ಸಂಸ್ಕೃತ, ಜರ್ಮನ್ ಭಾಷೆಯ ಒಲವು ಸಿದ್ಧಲಿಂಗನನ್ನು ಸೆಳೆಯುತ್ತಿತ್ತು. ಮುಂದೆ ಬಿ.ಪಿ. ನವಲಗುಂದ, ವರದರಾಜ ಹುಯಿಲಗೋಳರಂಥ ಶಿಕ್ಷಕರ ಮಾರ್ಗದರ್ಶನದಲ್ಲಿ ಸಿದ್ಧಲಿಂಗ ಪಟ್ಟಣಶೆಟ್ಟರು ಸಾಹಿತ್ಯದ ರುಚಿ ಹತ್ತಿಸಿಕೊಂಡರು. ಅವರ ಹರೆಯದ ಭಾವನೆಗಳಿಗೆ ಕಾವ್ಯ ಪೂರಕವಾಗಿ ಒದಗಿಬಂದು, ಕವಿತೆ ಎನ್ನುವುದು ಅವರ ಜೀವನದ ಶಾಶ್ವತ ಸಂಗತಿಯಾಯಿತು.

ಕಾವ್ಯದ ವಿಷಯದಲ್ಲಿ ಅವರದೇನಿದ್ದರೂ ಮುಮ್ಮುಖ ಚಲನೆ. ಈ ದಿನದವರೆಗೆ ಕವಿತೆ